ಶ್ರೀಮತಿ ಚಂದ್ರಪ್ರಭಾ ಅರಸ್ (ರೇಷ್ಮೆ ಮತ್ತು ಸಮಾಜ ಕಲ್ಯಾಣ ಸಚಿವೆ).—

ಅ) ದಿನಾಂಕ ೫–೩–೮೯ರಲ್ಲಿ ಮಂಜೂರು ಮಾಡಲಾಗಿದೆ.

ಆ) ಟೆಂಡರ್ ಪ್ರಕಾರ ೧೬–೪–೮೫ ರಂದು ಮುಗಿಯಬಹುದೆಂದು ಅಂದಾಜು ಮಾಡಲಾಗಿದೆ.

ಉಪ್ಪುನೀರು ತಡೆ ಅಣೆಕಟ್ಟು

೧೩೫೫. ಶ್ರೀ ವಸಂತ ವಿ. ಸಾಲ್ಯಾನ (ಕಾಪು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನ ಕಾಪು ಕ್ಷೇತ್ರದ ಮಟ್ಟು ಗ್ರಾಮದಲ್ಲಿ ನಿರ್ಮಿಸಿದ ಉಪ್ಪು ನೀರು ತಡೆ ಅಣೆಕಟ್ಟಿನಿಂದ ರೈತರಿಗೆ ಆಗುತ್ತಿರುವ ತೊಂದರೆಯ ವಿಷಯವು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಆರ್. ಎನ್. ಲಕ್ಷ್ಮಿಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಹೌದು.

ಆ) ಈ ಬಗ್ಗೆ ನಿರ್ದೇಶಕರು, ಕರ್ನಾಟಕ ತಾಂತ್ರಿಕ ಸಂಶೋಧನ ಕೇಂದ್ರ ಕೃಷ್ಣರಾಜಸಾಗರ ಇವರಿಂದ ತಾಂತ್ರಿಕ ಸಲಹೆ ಕೇಳಲಾಗಿದ್ದು ವರದಿ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಅಂಗನವಾಡಿ ಬಗ್ಗೆ

೧೩೫೮. ಶ್ರೀ ವಸಂತ ವಿ. ಸಾಲ್ಯಾನ್ (ಕಾಪು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಸಮಾಜ ಕಲ್ಯಾಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು.

ಆ) ಅವುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕಾರ್ಯಕರ್ತರ ಹಾಗೂ ಇತರ ಸಿಬ್ಬಂದಿ ವರ್ಗದವರ ಒಟ್ಟು ಸಂಖ್ಯೆ ಎಷ್ಟು.

ಇ) ಅವರಿಗೆ ಉದ್ಯೋಗ ಭದ್ರತೆ ಇದೆಯೋ ಹಾಗೂ ಅವರಿಗೆ ನೀಡುತ್ತಿರುವ ಮಾಸಿಕ ವೇತನ ಎಷ್ಟು.

ಈ) ಇತರ ಸರಕಾರಿ ನೌಕರರಿಗೆ ನೀಡುತ್ತಿರುವ ಸವಲತ್ತುಗಳನ್ನು ಮೇಲ್ಕಂಡ ನೌಕರರುಗಳಿಗೂ ನೀಡುವ ಬಗ್ಗೆ ಸರಕಾರದವರು ಕ್ರಮಕೈಕೊಂಡಿದ್ದಾರೆಯೇ?

ಶ್ರೀಮತಿ ಚಂದ್ರಪ್ರಭಾ ಅರಸ್.—ಸಮಾಜ ಕಲ್ಯಾಣ ಹಾಗೂ ರೇಷ್ಮೆ ಇಲಾಖೆಯ ಸಚಿವೆಯರು

ಅ) ೬೧೨

ಆ) ಅಂಗನವಾಡಿ ಕಾರ್ಯಕರ್ತೆಯರು... ..೬೧೨
ಸಹಾಯಕಿಯರು ೬೧೨

ಇ) ಉದ್ಯೋಗ ಭದ್ರತೆ ಇಲ್ಲ ಹಾಗೂ ಮಾಸಿಕ ವೇತನವೂ ನೀಡುತ್ತಿಲ್ಲ. ಆದರೆ ಅವರಿಗೆ ಮಾಹೆಯಾನ ಗೌರವಧನ ನೀಡಲಾಗುತ್ತಿದೆ.

ಈ) ಇಲ್ಲ.